ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಭ್ರಷ್ಟಾಚಾರದಿಂದ ತುಂಬಿತುಳುಕುತ್ತಿದ್ದು, ಈ ಭ್ರಷ್ಟಾಚಾರವನ್ನು ಹೋಗಲಾಡಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲಾಗುವುದು ? ಈ ಜಲ ಮಂಡಳಿಯಲ್ಲಿ ಬೇರು ಬಿಟ್ಟಿರುವ ಸ್ವಾರ್ಥಪರ ಹಿತಾಸಕ್ತಿ ಮತ್ತು ಕೆಲವು ಉನ್ನತ ಅಧಿಕಾರಿಗಳು ಬಿಡ್ತಿ ಹೊಂದಿ ಸರ್ಕಾರದಿಂದ ವರ್ಗಾವಣೆ ಆದೇಶ ನೀಡಿದ್ದರೂ ಅವರನ್ನು ಬಿಡುಗಡೆಗೊಳಿಸದೆ ವರ್ಗಾವಣೆ ಯಾಗಿ ಹೋಗದೆ ಇನ್ನೂ ಮಂಡಳಿಯಲ್ಲಿ ಉಳಿಸಿಕೊಳ್ಳುವ ಹಿನ್ನೆಲೆ ಏನು ? ಈ ಎಲ್ಲಾ ವಿಷಯದತ್ತ ಸೂಕ್ತ ಕ್ರಮ ಕೈಗೊಳ್ಳುವಂತೆ ಈ ಮೂಲಕ ಒತ್ತಾಯಪಡಿಸುತ್ತೇನೆ.

೧–೩೦ ಪಿ. ಎಂ.

ಶ್ರೀ ವಿ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದರ ಬಗ್ಗೆ ಗಮನ ಸೆಳೆಯುವ ಸೂಚನೆ ಬಂದಿತ್ತು. ಒಂದೇ ವಿಷಯಕ್ಕೆ ಸಂಬಂಧಪಟ್ಟ ವಿಚಾರಗಳು ಒಂದೇ ದಿನದಲ್ಲಿ ಎರಡು ಸಲ ಮೂರು ಸಲ ಬರುತ್ತವೆ. ಇವರಿಗೆ ೧೯೮೬ ಜನವರಿ ೧೯೮೭ರಿಂದ ಸಂಬಳ ಕೊಡುವ ಶೀರ್ಷಾನವನ್ನು ಜಲಮಂಡಳಿಯವರು ತೆಗೆದುಕೊಂಡಿದ್ದಾರೆ ಎನ್ನುವ ಮಾತನ್ನು ಈಗಾಗಲೇ ಹೇಳಿದ್ದೇನೆ. ಅದೇ ಉತ್ತರ ಇಲ್ಲೂ ಕೂಡ. ಆದರೆ ರೂಪಾಯಿ ಎಲ್ಲಿಂದ ಬರಬೇಕು? ನೀರಿನ ಬೆಲೆಯನ್ನು ಹತ್ತು ಪೈಸೆ, ಹದಿನೈದು ಪೈಸೆ ಜಾಸ್ತಿ ಮಾಡಿದರೆ ಎಲ್ಲಾ ಕಡೆಯಿಂದಲೂ ವಿರೋಧ ಬರುತ್ತದೆ. ಹೀಗಾದರೆ ಹಣವನ್ನು ಎಲ್ಲಿಂದ ಉತ್ಪತ್ತಿ ಮಾಡುವುದು ಎನ್ನುವುದನ್ನು ಕೂಡ ಸನ್ಮಾನ್ಯ ಸದಸ್ಯರು ನೆನಪಲ್ಲಿ ಇಟ್ಟುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀ ಕೆ. ಬಿ. ಮಲ್ಲಪ್ಪನವರೇ ನೀವು ಹೇಳಿ.

ಶ್ರೀ ಕೆ. ಬಿ. ಮಲ್ಲಪ್ಪ.—ಮಂಡಲ ಪಂಚಾಯತಿ ಮತ್ತು ಜಿಲ್ಲಾಪರಿಷತ್‌ಗೆ ಸಂಬಂಧಪಟ್ಟಂತೆ ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು.—ಇದು ಗಮನ ಸೆಳೆಯುವುದಲ್ಲ. ಷಿಫರ್ ನೋಟೀಸ್ ಇದು. ಓದಿ ಹೇಳಿ.

ಶ್ರೀ ಕೆ. ಬಿ. ಮಲ್ಲಪ್ಪ.—ಒಂದು ಪಾಸ್ಟಪೋಷಣವನ್ನು ಹೇಳುವುದಾದರೆ.....

ಅಧ್ಯಕ್ಷರು.—ನೋಟೀಸನ್ನು ಓದಿ ಹೇಳಿ. ಭಾಷಣ ಮಾಡುವುದಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ನನ್ನ ಹತ್ತಿರ ಅದರ ಪ್ರತಿ ಇಲ್ಲ.

ಅಧ್ಯಕ್ಷರು.—ಅದನ್ನು ನೀವು ವಕೀಲರು ಕೇಸ್ ಫೈಲ್ ಇಟ್ಟುಕೊಂಡಹಾಗೆ ಇಟ್ಟಿರಬೇಕು. ಒಂದು ಪ್ರತಿಯನ್ನು ನಿಮಗೆ ಕಳಿಸಿಕೊಡಲಾಗುತ್ತದೆ. ಈಗ ಓದಿ ಹೇಳಿ.

(೧೩) ಪಂಚಾಯತಿಗಳಲ್ಲಿ ಹಾಲಿ ಕೆಲಸ ಮಾಡುತ್ತಿರುವ ನೌಕರರ ಬಗ್ಗೆ.

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಸರಕಾರದವರು ಜಾರಿಗೆ ತಂದಿರುವ ಮಂಡಲ ಪಂಚಾಯ್ತಿ ಮತ್ತು ಜಿಲ್ಲಾ ಪರಿಷತ್ತು ಕಾಯಿದೆ ಮೇರೆಗೆ, ಈಗ ಹಾಲಿ ಪಂಚಾಯತಿಗಳಲ್ಲಿ ಕೆಲಸ ಮಾಡುತ್ತಿರುವ ಬಿಲ್ ಕಲೆಕ್ಟರ್, ಆಪರೇಟರ್, ಪಾಟರ್‌ಮನ್ ಹಾಗೂ ಸ್ವೀಪರ್ ಇವರುಗಳ ಕೆಲಸವು ಅನಿಶ್ಚತತೆ ಉಂಟಾಗಿರುವುದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಇವರುಗಳು ಸುಮಾರು ೧೫,೦೦೦ ನೌಕರರು ಕಷ್ಟಕ್ಕೆ ಸಿಕ್ಕಿಕೊಳ್ಳುವವರಿದ್ದಾರೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈ ಪಂಚಾಯತಿಗಳಲ್ಲಿ ಕೆಲಸ ಮಾಡತಕ್ಕಂಥ ನೌಕರರು ಏನಿದ್ದಾರೆ ಅವರ ವಿದ್ಯಾರ್ಹತೆಯನ್ನು ಪರಿಗಣಿಸಿ ಮಂಡಲ ಪಂಚಾಯತ್ ಕಾರ್ಯನಿರ್ವಹಣೆಗೆ ಯಾರ್ಯಾರು ಬೇಕಾಗಿದ್ದಾರೆ ಎಂದು ಮಂಡಲ್ ವ್ಯವಸ್ಥೆಯಲ್ಲಿ ಸೇರಿಸತಕ್ಕಂಥ ಕಾರ್ಯಕ್ರಮವನ್ನು ಸರ್ಕಾರ ಈಗಾಗಲೇ ಕೈಗೊಂಡಿದೆ. ಅವರ ಪ್ರಕಾರವೇ ಈ ಕಾರ್ಯಕ್ರಮವನ್ನು ತಂದಿದ್ದೇವೆ.

(೧೪) ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರುಗಳನ್ನು ಖಾಯಂಗೊಳಿಸುವುದು

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಉದ್ದೋದ್ದಗಲ ಮತ್ತು ತರಬೇತಿ ಇಲಾಖೆಯ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿಯಿವೆ ಎಂದು ಲೋಕಸೇವಾ ಆಯೋಗದಲ್ಲಿನೇ ಮೇ ತಿಂಗಳಲ್ಲಿ ಪ್ರಸಟಿಸಿದೆಯಾಗಿ ತಿಳಿದುಬಂದಿದೆ. ಆ ಹಾಲಿ ಖಾಲಿಯಿರುವ ಹುದ್ದೆಗಳಲ್ಲಿ ಗಳಿರಿ ಇಷ್ಟು ಸುಮಾರು ಶಿಫಸರ್‌ಗಳ ಹಿಂದೆ 'ರೋಷ್ಟರ್' ವಿಧಾನದಂತೆ ಆಯ್ಕೆಯಾಗಿ

ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ೧೯೮೧ರಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ಸರಕಾರಿ ಕಿರಿಯ ಕಾಲೇಜು ಉಸನ್ನಾಸಕರನ್ನು ಖಾಯಂಗೊಳಿಸಲಾಯಿತು. ಗುತ್ತಿಗೆ ಆಧಾರ ಮೇಲೆ ಕೆಲಸ ಮಾಡುತ್ತಿರುವ ೧೨,೦೦೦ಕ್ಕೂ ಮಿಕ್ಕಿ ಇರುವ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಕಿರಿಯ ಕಾಲೇಜು ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಶಿಕ್ಷಕರನ್ನು ಖಾಯಂಗೊಳಿಸಲು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಆಶ್ವಾಸನೆ ನೀಡಿದೆ. ಅದೇ ಸಹಾನುಭೂತಿಯ ಪರಿಶೀಲನೆ ಹಾಗೂ ಆಶ್ವಾಸನೆ, ಕೈಗಾರಿಕಾ ತರಬೇತಿ ಸಂಸ್ಥೆಗಳ ಅಧ್ಯಾಪಕರಿಗೂ ಆನ್ವಯಿಸ ಪುದೇ, ಲೋಕಸೇವಾ ಆಯೋಗದವರು ಪಾಲ್ಟೆಗಳನ್ನು ಭರ್ತಿ ಮಾಡುವಾಗ ಗುತ್ತಿಗೆ ಆಧಾರದ ಸಂತ್ರಸ್ತ ಉದ್ಯೋಗಿಗಳಿಗೆ ಅವಕಾಶ ನೀಡುವುದೇ ಎಂದು ತಿಳಿಯುಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.....ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಈ ಶಿಕ್ಷಕರ ಪ್ರಶ್ನೆಯನ್ನು ಕೂಡ ನಾವು ಉಳಿದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವವರ ಜೊತೆಯಲ್ಲಿ ಆಲೋಚನೆ ಮಾಡುತ್ತೇವೆ.

(೧೫) ಪ್ರತ್ಯೇಕವಾಗಿ ಉಡುಪಿ ಜಿಲ್ಲೆ ರಚನೆ ಮಾಡುವ ಬಗ್ಗೆ

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).....ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ಜನತೆಯ ಬಹು ವರ್ಷಗಳ ಸಾರ್ವತ್ರಿಕ ಬೇಡಿಕೆ. ಪ್ರತ್ಯೇಕ ಉಡುಪಿ ಜಿಲ್ಲೆಯ ರಚನೆ ಹಾಗೂ ಸೈಂದೂರು, ಬ್ರಹ್ಮಾವರ, ಪೂಲ್ಕಿ ಇತ್ಯಾದಿ ತಾಲ್ಲೂಕುಗಳ ರಚನೆ.

ಈ ಕುರಿತಾದ ಸಂಬಂಧಪಟ್ಟ ಶಾಸಕರ ಮನವಿಗೆ ಸರ್ಕಾರ ಇನ್ನೂ ಪುನ್ನಣೆ ನೀಡಿಲ್ಲ ಜಿಲ್ಲಾ ಪುನರ್ವಿಂಗಡಣಾ ಆಯೋಗದವರು ಈ ವಿಚಾರದಲ್ಲಿ ತುಂಬಾ ಅನುಕೂಲಕರವಾದ ವರದಿ ಮಾಡಿದ್ದಾರೆಂದು ತಿಳಿದು ಬಂದಿದ್ದರೂ ಸರ್ಕಾರ ತೀರ್ಮಾನ ಕೈಗೊಂಡಿಲ್ಲ. ಜಿಲ್ಲಾ ಪರಿಷತ್ ಚುನಾವಣೆಯು ಬಳಿಕ, ಜಿಲ್ಲೆಗಳ ಪುನರ್ರಚನೆ ಮಾಡಲಾಗುವುದೆಂಬ ಆಶ್ವಾಸನೆ ಹಾಗೇ ಉಳಿದಿದೆ. ಬಿಂಗಳೂರು ಜಿಲ್ಲೆಯ ವಿಭಜನೆ ಸಲುವಾಗಿ ಮಾತ್ರ ಚುನಾವಣೆಗೆ ಮೊದಲೇ ಕಾರ್ಯಗತವಾಗಿದೆ. ಉಡುಪಿ ಜಿಲ್ಲೆ ಹಾಗೂ ಬೈಂದೂರು ಇತ್ಯಾದಿ ತಾಲ್ಲೂಕುಗಳ ರಚನೆ ಯಾವಾಗ ಆಗುತ್ತದೆ ಮತ್ತು ದಕ್ಷಿಣ ಕನ್ನಡದ ಬಹು ಕ್ಲಿಷ್ಟವಾದ ಈಗಿನ ಆಡಳಿತ ಸಮಸ್ಯೆ ಹಾಗೂ ಹೊಣೆ ಎಂದಿಗೆ ಸರಳವೂ. ಸುಲಲಿತವೂ ಆಗುತ್ತದೆ ಎಂದು ತಿಳಿಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು).....ಮಾನ್ಯ ಅಧ್ಯಕ್ಷರೇ, ದಿನಾಂಕ ೨೫ನೇ ಮೇ ೧೯೮೫ರಲ್ಲಿ ಶ್ರೀ ಪುಂಜೇಕರ್‌ರವರ ನೇತೃತ್ವದಲ್ಲಿ ರಚಿಸಿರುವ ಜಿಲ್ಲಾ ಪುನರ್ವಿಂಗಡಣಾ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ಉಡುಪಿ ಹೊಸ ಜಿಲ್ಲೆ, ಹಾಗೂ ಪುಂಡೂರು ಹೊಸ ತಾಲ್ಲೂಕುಗಳಾದ ಮಂಲ್ಕಿ, ಬೈಂದೂರು ಹಾಗೂ ಬ್ರಹ್ಮಾವರಗಳನ್ನು ರಚಿಸಲು ಸರ್ಕಾರಕ್ಕೆ ಈಗಾಗಲೇ ಶಿಫಾರಸ್ಸು ಮಾಡಿದೆ. ಸದರಿ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ೨೧ನೇ ಆಗಸ್ಟ್ ೧೯೮೫ರಲ್ಲಿ ಸಲ್ಲಿಸಿದೆ. ಈ ವರದಿ ಬಂದ ನಂತರ ಕೆಲವೊಂದು ಮನವಿಗಳು ಸಾರ್ವಜನಿಕರಿಂದ, ಜಿಲ್ಲಾ ಹಾಗೂ ತಾಲ್ಲೂಕು ಪುನರ್ವಿಂಗಡಣೆ ಬಗ್ಗೆ ಬಂದಿವೆ. ಇವುಗಳನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳಲಾಗುತ್ತದೆ.

(೧೬) ಜಮಖಂಡಿಯ ಸರ್ಕಲ್ ಇನ್ಸ್‌ಪೆಕ್ಟರ್‌ರವರ ವರ್ಗಾವಣೆ ಬಗ್ಗೆ

ಶ್ರೀ ಬಾಬುರೆಡ್ಡಿ ಎ. ತುಂಗಳ್ (ಬೀಳಗಿ).....ಮಾನ್ಯ ಅಧ್ಯಕ್ಷರೇ, ಜಮಖಂಡಿಯಲ್ಲಿ ಸಿ ಎಸ್. ಜಂಗಮಂಶೆಟ್ಟಿ ಎಂಬ ಸರ್ಕಲ್ ಪೋಲೀಸ್ ಇನ್‌ಸ್ಪೆಕ್ಟರ್ ಇದ್ದಾರೆ. ಈ ಅಧಿಕಾರಿ ಅತ್ಯಂತ ಬ್ರಷ್ಟ ಅಧಿಕಾರಿಯಾಗಿದ್ದು, ಈತನ ಭ್ರಷ್ಟಾಚಾರದಿಂದ ಕೈಕೆಳಗಿನವರೆಲ್ಲಾ, ರೋಸಿ ಹೋಗಿ ಹಾಳಾಗಿದೆ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳಲ್ಲಿ ಈ ಅಧಿಕಾರಿ ಕಾನೂನು ಮತ್ತು ಸುವ್ಯವಸ್ಥೆಯ ಕೆಲಸ ಮಾಡದೆ ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸಿದ್ದಾನೆ. ಗಲಭೆಗಳು ನಡೆಯುತ್ತವೆಯೆಂಬ ಸೂಚನೆ ಗೊತ್ತಿದ್ದರೂ, ಈ ಅಧಿಕಾರಿ ಯಾವುದೇ ಕ್ರಮಗಳಿಗೆ ಮುಂದಾಗಿಲ್ಲ. ಈತನ ಬೇಜವಾಬ್ದಾರಿತನದಿಂದ ಅನೇಕ ಕಡೆ ನಮ್ಮ ಪಕ್ಷದ ಕಾರ್ಯಕರ್ತರು ಗಂಡಾಗಾಲಿಯಿಂದ ಹೊಡೆತ ತಿನ್ನಬೇಕಾಯಿತಲ್ಲದೆ, ಇದು ಅನೇಕರು ಮರಣವಾಕ್ಕೆ ಬಿದ್ದವರು. ಈ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ನಮ್ಮ ಪಕ್ಷದ ಅನೇಕ ಕಾರ್ಯಕರ್ತರ ಮೇಲೆ ಬಿದರಿ, ತದಲಬಾಗಿ, ಹಿರೇಪದಸಲಗಿ,